# ಕಾನೂನು ಕಿರಣ

# KANOONU KIRANA

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಕಾನೂನು ಸಾಕ್ಷರತಾ ಪತ್ರಿಕೆ

ಸಾರ್ವಜನಿಕ ಹಿತಾಸಕ್ತಿಯಲ್ಲಿ * ಖಾಸಗಿ ಪ್ರಸಾರಕ್ಕೆ ಮಾತ್ರ

LEGAL LITERACY NEWS LETTER OF KARNATAKA STATE LAW UNIVERSITY, HUBBALLI

ಹುಬ್ಬಳ್ಳಿ | ಮೇ- 2019 | ಪುಟ-4


## ನಮ್ಮ ದೇಶವು ಒಂದು ರಕ್ಷಣಾ ಯೋಗ್ಯವಾಗುವ ಹಾಗೆ ರೂಪಗೊಳ್ಳಬೇಕು : ಪ್ರೊ. ಎಸ್. ಎಂ. ಶಿವಪ್ರಸಾದ



**ಸಂವಿಧಾನ ಓದು ಕಾರ್ಯಕ್ರಮವನ್ನು ಅಂಬೇಡ್ಕರ ಪ್ರಚಾರ ಅಂಗವಾಗಿ ದಿನಾಂಕ : 09–05–2019ರಂದು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪ್ರೊ. ಎಸ್. ಎಂ. ಶಿವಪ್ರಸಾದ, ಗೌರವಾನ್ವಿತ ಕುಲಪತಿಗಳಾದ ಪ್ರೊ. (ಡಾ.) ಪಿ. ಈಶ್ವರ ಭಟ್ ಹಾಗೂ ಇತರ ಗಣ್ಯರು ಉಪಸ್ಥಿತರಿರುವರು**

ಸಂವಿಧಾನ ಓದು ಕಾರ್ಯಕ್ರಮವನ್ನು ಅಂಬೇಡ್ಕರ ಪ್ರಚಾರ ಅಭಿಯಾನದ ಅಂಗವಾಗಿ ದಿನಾಂಕ 09–05–2019 ರಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಾಜ್ಯ ಎನ್.ಎಸ್.ಎಸ್. ಸೆಲ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಪ್ರೊ.ಎಸ್. ಎಂ. ಶಿವಪ್ರಸಾದ, ನಿರ್ದೇಶಕರು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡಮಿ, ಧಾರವಾಡ. ಇವರು ಉಧ್ಘಾಟಿಸಿದರು. ತಮ್ಮ ಉಧ್ಘಾಟನಾ ಭಾಷಣದಲ್ಲಿ ನಮ್ಮ ದೇಶವು ಒಂದು ರಕ್ಷಣಾ ಯೋಗ್ಯವಾಗುವ ಹಾಗೆ ರೂಪಗೊಳ್ಳಬೇಕೆಂದು ತಿಳಿಸಿದರು. ಈ ಕಾರ್ಯದಲ್ಲಿ ಶಿಕ್ಷಕರು, ಸಾಮಾಜಿಕ ಸೇವಾ ಕಾರ್ಯಕರ್ತರು ಹಾಗೂ ನ್ಯಾಯಾಂಗ ಇವುಗಳ ಪಾತ್ರ ಅತಿ ಮಹತ್ವದ್ದಾಗಿದೆ ಎಂದು ಮನಮುಟ್ಟುವ ಹಾಗೆ ತಿಳಿಸಿದರು. ಕರಾಕಾವಿಯ ಗೌರವಾನ್ವಿತ ಕುಲಪತಿಗಳಾದ ಪ್ರೊ. ಪಿ. ಈಶ್ವರ ಭಟ್ ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂವಿಧಾನದ ಮಹತ್ವ ಮತ್ತು ಈ ಕಾರ್ಯಕ್ರಮದ ಔಚಿತ್ಯವನ್ನು ವಿವರಿಸಿದರು. ಉದ್ಘಾಟನಾ ಸಮಾರಂಭದ ನಂತರ ಡಾ.ಕೆ.ಎಸ್. ಶರ್ಮಾರವರು ಸಂವಿಧಾನದ ಅಪರೂಪದ ವಿವಿಧ ಆಯಾಮಗಳನ್ನು ತಿಳಿಸಿದರು. ಗೌರವಾನ್ವಿತ ಕುಲಪತಿಗಳಾದ ಪ್ರೊ. ಪಿ. ಈಶ್ವರ ಭಟ್‌ರವರು ಒಕ್ಕೂಟ ಪದ್ಧತಿಯ ಕಾರ್ಯ ವೈಖರಿಯನ್ನು ವಿವರವಾಗಿ ತಿಳಿಸಿದರು. ಡಾ. ಜಿ. ಬಿ. ಪಾಟೀಲ, ಕುಲಸಚಿವರು (ಪರೀಕ್ಷಾಂಗ) ವಿಭಾಗ ಸಂವಿಧಾನದಲ್ಲಿ ಪ್ರಸ್ತಾವನೆಯ ಮಹತ್ವವನ್ನು ಚರ್ಚಿಸಿದರು. ಶ್ರೀ. ಗಿರೀಶ ಕೆ. ಸಿ., ಸಹಾಯಕ ಪ್ರಾಧ್ಯಾಪಕರು ಇವರು ಮೂಲಭೂತ ಹಕ್ಕುಗಳು ಮತ್ತು ಅವುಗಳ ಮಹತ್ವದ ಬಗ್ಗೆ ತಿಳಿಸಿ ದರು. ಪ್ರೊ. ಸಿ. ಎಸ್. ಪಾಟೀಲ, ಡೀನ್ ಮತ್ತು ನಿರ್ದೇಶಕರು ಇವರು ರಾಜನೀತಿ ನಿರ್ದೇ ಶಾತ್ಮಕತ್ವಗಳು ಹಾಗೂ ಮೂಲಭೂತ ಕರ್ತವ್ಯಗಳನ್ನು ವಿವರಿಸಿದರು. ಡಾ. ರಾಜೇಂದ್ರ ಹಿಟ್ಟಣಗಿ, ಸಹಾಯಕ ಪ್ರಾಧ್ಯಾಪಕರು ಈ ಕಾರ್ಯಕ್ರಮದ ಸಂಯೋಜಕರಾಗಿ ಕಾರ್ಯನಿರ್ವಹಿಸಿದರು.ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ವಿವಿಧ ಎನ್.ಎಸ್.ಎಸ್. ಘಟಕಗಳ ಸ್ವಯಂ ಸೇವಕರು ಹಾಗೂ ಎನ್.ಎಸ್.ಎಸ್. ಕಾರ್ಯಕ್ರಮದ ಅಧಿಕಾರಿಗಳು ಭಾಗವಹಿಸಿದ್ದರು.

❖

## ಸಂಪಾದಕೀಯ

ನಮ್ಮ ಕಾನೂನು ವ್ಯವಸ್ಥೆಯ ಕಾರ್ಯಚರಣೆಯು ನ್ಯಾಯಸಾಧನೆಗೆ ದಾರಿಯಾಗಬೇಕೆಂದೂ, ರಾಜ್ಯವು ಸರ್ವರಿಗೂ ಸಮಾನ ನ್ಯಾಯವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊತ್ತಿದೆಯೆಂದೂ ಹೇಳುವ ಸಾಂವಿಧಾನಿಕ ನಿರ್ದೇಶನದ (ಅನುಚ್ಛೇದ 39 A) ಇಂಗಿತವು ಕಾನೂನಿಗೂ ನ್ಯಾಯಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದಲ್ಲದೆ ಕಾನೂನು ನೆರವಿನ ಧೋರಣೆಯ ತಿರುಳುಕೂಡಾ ಆಗಿದೆ. ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವುದು ಕಾನೂನು ನೆರವು ಕಾರ್ಯಕ್ರಮದ ಅನಿವಾರ್ಯ ಭಾಗವಾಗಿದೆ. ಕಾನೂನು ನೆರವು ಕೇಂದ್ರ (legal aid clinic) ಮತ್ತು ಕಾನೂನು ಸಾಕ್ಷರತಾ ಆಂದೋಲನದ ಮೂಲಕ ಕಾನೂನು ವಿದ್ಯಾರ್ಥಿಗಳು ತಮ್ಮನ್ನು ತಾವು ಸಾಮುದಾಯಿಕ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಕಾನೂನಿನ ಸಾಮಾಜಿಕ ಪ್ರಸ್ತುತತೆಯನ್ನು, ಸುಖೀ ಪ್ರಜಾಪ್ರಭುತ್ವದ ಆಯಾಮವನ್ನು ಹಾಗೂ ಕಾನೂನು ಕಾರ್ಯಾಚರಣೆಯ ಪ್ರಕ್ರಿಯೆಯನ್ನು ಅರಿತುಕೊಳಲು ಬಹಳಷ್ಟು ಸಹಾಯ ವಾಗುತ್ತವೆ. ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಸೇವಾಸಕ್ತ ಸಂಘಟನೆಗಳೊಂದಿಗೆ ಪಾಲುಗಾರಿಕೆ ಯಿಂದ ಕಾರ್ಯ ನಿರ್ವಹಿಸುವುದು ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೂ ಅವಕಾಶ ಮಾಡಿಕೊಡುತ್ತದೆ.

ಮೇಲಿನ ಧ್ಯೇಯಕ್ಕೆ ಪೂರಕವಾಗಿರುವ ಹಾಗೂ ಸಾರ್ವಜನಿಕರಿಗೆ ಕಾನೂನು ಮಾಹಿತಿಯನ್ನು ಪ್ರಸರಿಸುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 'ಕಾನೂನು ಕಿರಣ' 2019ನೇ ಇಸವಿಯ ಮೇ ಸಂಚಿಕೆ ನಿಮ್ಮ ಮುಂದಿದೆ. ಈ ಸಾಕ್ಷರತಾ ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಾಕ್ಷರತಾ/ ನೆರವು ಕಾರ್ಯಕ್ರಮಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲು ನಿಮ್ಮ ಸಲಹೆಗೆ ಸ್ವಾಗತ.

ನಿಮ್ಮ ವಿಶ್ವಾಸಿ,
**ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.


## ಸಂಪಾದಕೀಯ ಮಂಡಳಿ

**ಪ್ರೊ. (ಡಾ.) ಪಿ. ಈಶ್ವರ ಭಟ್** — **ಪೋಷಕರು**
ಕುಲಪತಿಗಳು
ಕರಾಕಾವಿ, ಹುಬ್ಬಳ್ಳಿ.

**ಪ್ರೊ. ಡಾ. ಸಿ. ಎಸ್. ಪಾಟೀಲ** — **ಸಲಹೆಗಾರರು**
ಡೀನ್ ಮತ್ತು ನಿರ್ದೇಶಕರು,
ಕರಾಕಾವಿ ಕಾನೂನು ಶಾಲೆ, ಹುಬ್ಬಳ್ಳಿ.

**ಡಾ. ರತ್ನಾ ಭರಮಗೌಡರ** — **ಸಲಹೆಗಾರರು**
ಕುಲಸಚಿವರು (ಪ್ರಭಾರ)
ಕರಾಕಾವಿ, ಹುಬ್ಬಳ್ಳಿ.

**ಡಾ. ಜಿ. ಬಿ. ಪಾಟೀಲ** — **ಸಲಹೆಗಾರರು**
ಕುಲಸಚಿವರು ಮೌಲ್ಯಮಾಪನ (ಪ್ರಭಾರ),
ಕರಾಕಾವಿ, ಹುಬ್ಬಳ್ಳಿ.

**ಡಾ. ಭೀಮಾಬಾಯಿ ಎಸ್. ಮೂಲಗೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಡಾ. ರಂಗಸ್ವಾಮಿ ಡಿ.** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಶ್ರೀ. ಸುನಿಲ ಬಾಗಡೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.


# ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಕಾನೂನು

## ಭಾಗ-2


-ಪ್ರೊ. (ಡಾ.) ಪಿ. ಈಶ್ವರ ಭಟ್
ಕುಲಪತಿಗಳು,
ಕರಾಕಾವಿ, ನವನಗರ, ಹುಬ್ಬಳ್ಳಿ.


### ಅಂತರ್ರಾಷ್ಟ್ರೀಯ ಕಾನೂನು

ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಕಾರ್ಯದಲ್ಲಿ ಅಂತರ್ರಾಷ್ಟ್ರೀಯ ಕಾನೂನು ಮಹತ್ತರ ಪಾತ್ರವನ್ನು ವಹಿಸಿದೆ. ಮೂರು ಪ್ರಮುಖವಾದ ಅಂತರ್ರಾಷ್ಟ್ರೀಯ ಒಡಂಬಡಿಕೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತವೆ. (1) ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಮೇಲಿನ ಒಡಂಬಡಿಕೆ 1966, (2) ಜಾಗತಿಕ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಯ ರಕ್ಷಣೆಗಿರುವ ಯುನೆಸ್ಕೊ ಅಂತರ್ರಾಷ್ಟ್ರೀಯ ಒಪ್ಪಂದ 1972; ಮತ್ತು 3) ಶಸ್ತ್ರಸಜ್ಜಿತ ಸಂಘರ್ಷದ ಸಂದರ್ಭದಲ್ಲಿ ಸಾಂಸ್ಕೃತಿಕ ಆಸ್ತಿಗಳ ರಕ್ಷಣೆಗಿರುವ ಹೇಗ್ ಒಪ್ಪಂದ 1954. ಸಾಂಸ್ಕೃತಿಕ ಪರಂಪರೆಗೆ ಮಾನವ ಹಕ್ಕಿನ ಮನ್ನಣೆ ಒಂದು ಕಡೆಯಾದರೆ, ಅವುಗಳನ್ನು ಎಲ್ಲಾ ಸಂದರ್ಭಗಳಲ್ಲೂ ರಕ್ಷಿಸಲು ರಾಷ್ಟ್ರಗಳಿರುವ ಬಾಧ್ಯತೆ ಇನ್ನೊಂದು ಕಡೆ ಅಂತರ್ರಾಷ್ಟ್ರೀಯ ಕಾನೂನಿನ ಇಂಗಿತವಾಗಿರುತ್ತದೆ.

(1) ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಮೇಲಿನ ಅಂತರ್ರಾಷ್ಟ್ರೀಯ ಒಡಂಬಡಿಕೆ 1966, ಅನುಚ್ಛೇದ 15ರ ಪ್ರಕಾರ ಪ್ರತಿಯೊಬ್ಬರಿಗೂ ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸುವ ಹಕ್ಕಿದೆ. ಈ ಮಾನವ ಹಕ್ಕಿನ ಪೂರ್ಣ ಪ್ರಮಾಣದ ಅನುಷ್ಠಾನಕ್ಕಾಗಿ ಈ ಒಡಂಬಡಿಕೆಯು ಜವಾಬ್ದಾರಿಯುಳ್ಳ ರಾಜ್ಯಗಳು ತೆಗೆದುಕೊಳ್ಳುವ ಹೆಜ್ಜೆಗಳಲ್ಲಿ ವಿಜ್ಞಾನ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ, ಅಭಿವೃದ್ಧಿಪಡಿಸುವ ಮತ್ತು ಪ್ರಸರಣಗೊಳಿಸುವ ಹೆಜ್ಜೆಯೂ ಸೇರಿರುತ್ತದೆ.

(2) ಯುನೆಸ್ಕೊ 1972ರಲ್ಲಿ ಅಂಗೀಕರಿಸಿದ ಜಾಗತಿಕ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳನ್ನು ರಕ್ಷಿಸುವ ಸಲುವಾಗಿ ಮಾಡಿದ ಅಂತರ್ರಾಷ್ಟ್ರೀಯ ಒಪ್ಪಂದವು ಬಹಳ ಮುಖ್ಯವಾದ ಮತ್ತು ವಿವರಗಳುಳ್ಳದ್ದಾಗಿದೆ. ಯಾವುದೇ ಸಾಂಸ್ಕೃತಿಕ ಅಥವಾ ಪ್ರಾಕೃತಿಕ ಪರಂಪರೆಯ ಅವನತಿ ಅಥವಾ ನಾಶವು ಜಗತ್ತಿನ ಎಲ್ಲ ರಾಷ್ಟ್ರಗಳ ಪರಂಪರೆಗೆ ಹಾನಿಕಾರಕ ದಾರಿದ್ರ್ಯವನ್ನು ತಂದಂತೆ ಎಂಬುದನ್ನು ಇದು ಪರಿಗಣಿಸುತ್ತದೆ. ಈ ಪರಂಪರೆಯ ರಕ್ಷಣೆಗೆ ಬೇಕಾದ ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಸಂಪನ್ಮೂಲಗಳು ರಾಷ್ಟ್ರಮಟ್ಟದಲ್ಲಿ ಲಭ್ಯವಿಲ್ಲದಾಗ ಜಗತ್ತಿನ ರಾಷ್ಟ್ರಗಳ ಸಹಕಾರದಿಂದ ಸಂರಕ್ಷಣಾ ಕಾರ್ಯಕ್ಕೆ ಬೆಂಬಲ ಕೊಡುವ ಅವಶ್ಯಕತೆಯಿದೆಯೆಂದು ಇದು ಪರಿಗಣಿಸುತ್ತದೆ. ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳು ಕೆಟ್ಟು ಹೋಗಲು ರೂಢಿಯಲ್ಲಿರುವ ಕಾರಣಗಳಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಬದಲಾವಣೆಗಳು ಗಂಭೀರವಾದ ಆಘಾತ ಮತ್ತು ವಿನಾಶವನ್ನು ತಂದೊಡ್ಡುತ್ತವೆ ಯಾದ್ದರಿಂದ ಈ ಸಮಸ್ಯೆಗೆ ವಿಶೇಷ ರೀತಿಯ ಪರಿಹಾರದ ಕ್ರಮವು ಅಗತ್ಯವಿದೆಯೆಂಬುದನ್ನು ಈ ಒಪ್ಪಂದವು ಮನ್ನಿಸಿದೆ. 'ಸಾಂಸ್ಕೃತಿಕ ಪರಂಪರೆ'ಯು ವ್ಯಾಖ್ಯೆಯ ಒಳಗೆ ಸ್ಮಾರಕಗಳು (ಇತಿಹಾಸ, ವಿಜ್ಞಾನ ಅಥವಾ ಕಲೆಯ ದೃಷ್ಟಿಯಿಂದ ವಿಶ್ವಮಟ್ಟದಲ್ಲಿ ಎದ್ದು ಕಾಣುವ ವಾಸ್ತುಶಿಲ್ಪಗಳು, ಶಿಲ್ಪ ಮತ್ತು ಚಿತ್ರವುಳ್ಳ ಸ್ಮಾರಕಗಳು, ಪುರಾತತ್ವ ಸ್ವರೂಪದ ಕಟ್ಟಡ ವಿನ್ಯಾಸಗಳು ಮತ್ತು ಅವುಗಳ ಭಾಗಗಳು), ಕಟ್ಟಡಗಳ ಸಮುಚ್ಚಯಗಳು (ತಮ್ಮ ವಾಸ್ತುಶಿಲ್ಪ, ಸಾರೂಪ್ಯ ಮತ್ತು ಸ್ಥಳ ವಿಶೇಷಗಳ ಕಾರಣದಿಂದ ಇತಿಹಾಸ, ಕಲೆ ಅಥವಾ ವಿಜ್ಞಾನದ ದೃಷ್ಟಿಯಿಂದ ಅಗ್ರಮಾನ್ಯವಾದ ಪ್ರತ್ಯೇಕ ಅಥವಾ ಒಂದಕ್ಕೊಂದು ಹೊಂದಿಕೊಂಡ ಕಟ್ಟಡಗಳ ಗುಂಪು) ಮತ್ತು ನಿವೇಶನಗಳು (ಐತಿಹಾಸಿಕ, ಸೌಂದರ್ಯ, ಬುಡಕಟ್ಟು ಅಥವಾ ಮಾನವ ಶಾಸ್ತ್ರ ದೃಷ್ಟಿಯಿಂದ ವಿಶ್ವಮಟ್ಟದಲ್ಲಿ ಎದ್ದು ಕಾಣುವ ಮನುಷ್ಯ ನಿರ್ಮಿತ ಅಥವಾ ಮನುಷ್ಯ ಮತ್ತು ಪ್ರಕೃತಿಗಳಿಂದ ಒಟ್ಟಾಗಿ ಮಾಡಲ್ಪಟ್ಟ ಕೃತಿಗಳು, ಸ್ಥಳಗಳು ಮತ್ತು ಪುರಾತತ್ವ ನಿವೇಶನಗಳು) ಬರುತ್ತವೆ. 'ಪ್ರಾಕೃತಿಕ ಪರಂಪರೆ'ಯೊಳಗೆ ಸೌಂದರ್ಯ ಮತ್ತು ವಿಜ್ಞಾನದ ದೃಷ್ಟಿಯಿಂದ ಅಗ್ರಮಾನ್ಯವಾಗಿರುವ ಭೌತಿಕ ಮತ್ತು ಜೀವಶಾಸ್ತ್ರೀಯ ರಚನೆಗಳು, ಭೂಗರ್ಭ ಮತ್ತು ಭೌಗೋಳಿಕ ರಚನೆಗಳು ಮತ್ತು ಪ್ರಕೃತಿ ಸೌಂದರ್ಯದ ಸಂರಕ್ಷಣೆಯ ದೃಷ್ಟಿಯಿಂದ ವಿಶ್ವಮಾನ್ಯಗೊಳ್ಳತಕ್ಕ ಪ್ರಾಕೃತಿಕ ಪ್ರದೇಶಗಳು ಬರುತ್ತವೆ. ಯೂನೆಸ್ಕೊ ಒಪ್ಪಂದ 1972ಕ್ಕೆ ಬದ್ಧವಾದ ಎಲ್ಲ ರಾಷ್ಟ್ರಗಳು ತಮ್ಮ ಭೂಕ್ಷೇತ್ರದಲ್ಲಿ ಬರುವ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳ ಗುರುತಿಸುವಿಕೆ, ಪೊರೆಯುವಿಕೆ, ಸಂರಕ್ಷಣೆ, ಪ್ರದರ್ಶನ ಮತ್ತು ಹಸ್ತಾಂತರವನ್ನು ಮುಂದಿನ ಜನಾಂಗಕ್ಕೆ ಲಭಿಸುವಂತೆ ಮಾಡಲು ಕರ್ತವ್ಯವುಳ್ಳವ ರಾಗಿರುತ್ತಾರೆ. ತನ್ನ ಸಂಪನ್ಮೂಲವನ್ನು ಬಳಸಿ ಅಥವಾ ಬೇಕಿದ್ದಲ್ಲಿ ಅಂತಾರಾಷ್ಟ್ರೀಯ ಬೆಂಬಲ ಮತ್ತು ಸಹಕಾರಗಳನ್ನು ಪಡೆಯುತ್ತಾ ರಾಷ್ಟ್ರಗಳು ಈ ಕರ್ತವ್ಯವನ್ನು ನಿಭಾಯಿಸತಕ್ಕುದು. ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳನ್ನು ಪರಿಣಾಮಕಾರಿ ಯಾಗಿ ಮತ್ತು ಕ್ರಿಯಾತ್ಮಕವಾಗಿ ಉಳಿಸುವ, ಸಂರಕ್ಷಿಸುವ ಮತ್ತು ಅಭಿವ್ಯಕ್ತಿಪಡಿಸುವ ಈ ಕೆಳಗಿನ ಕ್ರಮಗಳನ್ನು ಒಳಗೊಂಡಂತೆ ಸೂಕ್ತ ಕ್ರಮಗಳನ್ನು ಪ್ರತಿಯೊದು ರಾಷ್ಟ್ರವೂ ಮಾಡತಕ್ಕುದು: (1) ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಯ ರಕ್ಷಣೆಯನ್ನು ಸಮುದಾಯದ ಬದುಕಿನ ಭಾಗವನ್ನಾಗಿ ಮತ್ತು ವ್ಯಾಪಕ ಯೋಜನಾ ಕಾರ್ಯದ ಅಂಗವಾಗಿ ಮಾಡುವ ಸಾಮಾನ್ಯ ಧ್ಯೇಯಧೋರಣೆಯನ್ನು ಅಳವಡಿಸುವುದು; (2) ತನ್ನ ಭೂಕ್ಷೇತ್ರದಲ್ಲಿ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಯ ಸಂರಕ್ಷಣೆಗೆ ಸದ್ಯ ಚಾಲ್ತಿಯಲ್ಲಿ ಇಲ್ಲದ, ಆದರೆ ಅಗತ್ಯವಾದ ಸೇವೆಗಳನ್ನು ಕೌಶಲ್ಯವುಳ್ಳ ಸೂಕ್ತ ಸಿಬ್ಬಂದಿಯ ಸಹಾಯದಿಂದ ಒದಗಿಸುವುದು; (3) ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗೆ

(ನಾಲ್ಕನೇ ಪುಟಕ್ಕೆ)

# ವಕೀಲ ವೃತ್ತಿಯ ಕರ್ತವ್ಯಗಳು

ಡಾ. ಭೀಮಾಬಾಯಿ ಎಸ್. ಮೂಲಗೆ
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ

ನಮ್ಮರಾಷ್ಟ್ರದ ಆಡಳಿತ ವ್ಯವಸ್ಥೆಯು ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಳೆಂದು ಮೂರು ಭಾಗಗಳಲ್ಲಿ ವಿಂಗಡನೆಯಾಗಿರುವದನ್ನು ನೋಡುತ್ತೇವೆ. ನ್ಯಾಯಾಲಯಗಳು ಮತ್ತು ನ್ಯಾಯವಾದಿಗಳು ನ್ಯಾಯಾಂಗದ ಬಹುಮುಖ್ಯ ಉಪಾಂಗಗಳಾಗಿದ್ದು, ನ್ಯಾಯಾಂಗದ ಯಶಸ್ವಿ ಕಾರ್ಯನಿರ್ವಹಣೆಯಲ್ಲಿ ನ್ಯಾಯವಾದಿಗಳ ಪಾತ್ರ ಬಹುಮಹತ್ವದ್ದಾಗಿದೆ. ಏಕೆಂದರೆ, ಕರಾರಿನ ಉಲ್ಲಂಘನೆ, ಕೌಟುಂಬಿಕ ಶಾಂತಿ ಹಾಗೂ ನೆಮ್ಮದಿ ಹದಗೆಡುವಿಕೆ, ವ್ಯಕ್ತಿ ವ್ಯಕ್ತಿಗಳ ನಡುವಿನ ವೈಷಮ್ಯ, ಕೊಲೆ, ಸುಲಿಗೆ ಕಳ್ಳತನ, ತನ್ನದಲ್ಲದ ತಪ್ಪಿಗೆ ಬಲಿ ಪಶುವಾಗಿವಿಕೆ ಹೀಗೆ ಅನೇಕ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿತನ್ನ ಸಂಕಷ್ಟಗಳಿಗೆ ಪರಿಹಾರ ಬಯಸಿ ವಕೀಲರ ಮೊರೆ ಹೋಗುತ್ತಾನೆ. ಪರಿಹಾರ ಬಯಸಿಬಂದ ಕಕ್ಷಿದಾರನ ಬದುಕಿನ ಒತ್ತಾಸೆ ಗಳಿಗೂ ಹಾಗೂ ಕಾನೂನಿಗೂ ಇರುವ ಸಂಬಂಧವನ್ನು ಪರಿಚಯಿಸಿ ಸಮಾಜವನ್ನು ಅನಗತ್ಯ ವಿವಾದಗಳಿಂದ ಮುಕ್ತ ಮಾಡುವ ಜವಾಬ್ದಾರಿ ವಕೀಲರ ಮೇಲಿದೆ. ಈ ಜವಾಬ್ದಾರಿಯನ್ನು ಮನಗಂಡ ಸರಕಾರವು ವಕೀಲರ ಕರ್ತವ್ಯ ನಿಷ್ಠೆ, ಶ್ರಮ, ಶ್ರದ್ಧೆ, ಜವಾಬ್ದಾರಿ ಹಾಗೂ ನೈತಿಕತೆಗಳನ್ನು ಬಿಂಬಿಸುವಂತಹ ಏಕರೂಪದ ಕಾಯ್ದೆಯನ್ನು ರಾಷ್ಟ್ರ ಮಟ್ಟದಲ್ಲಿ ವಕೀಲರ ಕಾಯ್ದೆ, 1961 ಎಂಬ ಹೆಸರಿನಲ್ಲಿ ಜಾರಿಗೆ ತರಲಾಯಿತು. ಒಬ್ಬ ವ್ಯಕ್ತಿಯು ಇಂತಹ ವೃತ್ತಿ ಯನ್ನು ಪ್ರಾರಂಭಿಸಬೇಕಾದರೆ ವಕೀಲರಕಾಯ್ದೆ, 1961 ರ ಕಲಂ 24 (1) ರಲ್ಲಿ ಹೇಳಿರುವಂತೆ ಈ ಕೆಳಗಿನ ಸಾಮಾನ್ಯ ಅರ್ಹತೆಗಳನ್ನು ಹೊಂದಿರಬೇಕು.

**ನ್ಯಾಯಾವಾದಿಯಾಗಲುಇರಬೇಕಾದ ಸಾಮಾನ್ಯ ಅರ್ಹತೆಗಳು**

1) ನ್ಯಾಯವಾದಿಯಾಗಬಯಸುವ ವ್ಯಕ್ತಿಯು ಭಾರತದ ಪ್ರಜೆಯಾಗಿರಬೇಕು.

2) ರಾಷ್ಟ್ರದ ಮಾನ್ಯತೆ ಪಡೆದಯಾವುದೇ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಪಡೆದಿರಬೇಕು.

3) 21 ವರ್ಷ ವಯಸ್ಸನ್ನು ಪೂರ್ಣಗೊಂಡಿರಬೇಕು.

4) ರಾಜ್ಯ ಅಥವಾ ರಾಷ್ಟ್ರ ಸರ್ಕಾರಗಳಿಂದ ಇಲ್ಲವೇ ಯಾವುದೇ ನೋಂದಾಯಿತ ಸಂಸ್ಥೆಯ ಸೇವೆಯಲ್ಲಿದ್ದು, ನೈತಿಕತೆ ಆಧಾರಿತ ತಪ್ಪಸಗಿಗೆ ಸೇವೆಯಿಂದ ವಜಾಗೊಂಡಿರಬಾರದು.

5) ಘೋರ, ನೈತಿಕ ಅಪರಾಧಕ್ಕಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರಬಾರದು.

6) ರಾಷ್ಟ್ರದ ಯಾವುದೇ ರಾಜ್ಯ ವಕೀಲ ಮಂಡಲಿಯಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರಬೇಕು.

ಮೇಲೆ ಸೂಚಿಸಿರುವ ಸಾಮಾನ್ಯ ಅರ್ಹತೆಗಳುಳ್ಳ ಯಾವುದೇ ವ್ಯಕ್ತಿಯುರಾಷ್ಟ್ರದ ಶ್ರೇಷ್ಠನ್ಯಾಯಾಲಯದಿಂದ ಹಿಡಿದು ಅದರ ಎಲ್ಲ ಅಧೀನ ನ್ಯಾಯಾಲಯಗಳು, ನ್ಯಾಯಾಧೀಕರಣಗಳು, ಪ್ರಾಧಿಕಾರಗಳು ಮತ್ತು ನ್ಯಾಯವಾದಿಗಳು ಭಾಗವಹಿಸಬಹುದಾದ ಮಂಡಳಿಗಳಲ್ಲಿ ನ್ಯಾಯವಾದಿಯಾಗಿ/ವಕೀಲನಾಗಿ ಕಾರ್ಯನಿರ್ವಹಿಸಬಹುದು.

**ನಾಗರಿಕ ವ್ಯಕ್ತಿಯ ಹಕ್ಕು (ಕಲಂ 55 (ಬಿ)) :** ಭಾರತದಯಾವುದೇ ಪ್ರಜೆಯುಯಾವುದೇ ವಕೀಲ ಕಾಯ್ದೆಗೆ ಒಳಪಡದೆ ಮತ್ತು ವಕೀಲನಾಗಲು ಯಾವುದೇ ಅರ್ಹತೆಯನ್ನು ಹೊಂದಿರದೆ, ತನ್ನ ಹಕ್ಕಿಗಾಗಿ/ನ್ಯಾಯಕ್ಕಾಗಿ ನ್ಯಾಯಾಲಯಗಳ ಸಮ್ಮತಿಯ ಮೇರೆಗೆ ತಾನೇ ವಾದ ಮಂಡಿಸಿ ನ್ಯಾಯಪಡೆಯಲು ಸ್ವತಂತ್ರನಾಗಿರುತ್ತಾನೆ.

**ನ್ಯಾಯವಾದಿ/ವಕೀಲರ ಕರ್ತವ್ಯಗಳು**

**1) ನ್ಯಾಯಾಲಯದಲ್ಲಿನ ಕರ್ತವ್ಯಗಳು:** ಭಾರತದ ವಕೀಲ ಕಾಯ್ದೆಯ (ನಿಯಮ 1 ರಿಂದ 10) ಪ್ರಕಾರ, ಒಬ್ಬ ನ್ಯಾಯ ವಾದಿಯು ನ್ಯಾಯಾಲಯಗಳ ಬಗ್ಗೆ ಅಗೌರವ ದಿಂದ ನಡೆದುಕೊಳ್ಳುವದು, ತನ್ನಕಕ್ಷಿದಾರನಿಗೆ ನ್ಯಾಯ ದೊರಕಿಸಿಕೊಡುವ ಪ್ರಯತ್ನದಲ್ಲಿ ನ್ಯಾಯಾಲಯಕ್ಕೆ ತಪ್ಪು ಮಾಹಿತಿಯನ್ನು ನೀಡುವುದು, ನ್ಯಾಯ ಸಮ್ಮತವಲ್ಲದ ರೀತಿಯಲ್ಲಿ ನ್ಯಾಯಾಧೀಶರ ಅಥವಾ ನ್ಯಾಯಾಲಯಗಳ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇರೀತಿಯ ಪ್ರಭಾವ ಬೀರುವುದು, ಅನಾವಶ್ಯಕವಾಗಿ ತಂತ್ರಗಳನ್ನು ಉಪಯೋಗಿಸಿ ಪ್ರಕರಣವನ್ನು ವಿಲೇವಾರಿಯಾಗಿಸುವಲ್ಲಿ ಕಾಲಹರಣ ಮಾಡುವುದು, ವಾದ ಅಥವಾ ಪ್ರತಿವಾದದಲ್ಲಿ ಅಶ್ಲೀಲ, ಅಸಭ್ಯ, ಅನಾಗರಿಕ ಭಾಷೆಯನ್ನು ಪಯೋಗಿಸುವುದು ಮಾಡಬಾರದು. ನ್ಯಾಯವಾದಿಯು ನ್ಯಾಯಾಲಯದ ತೀರ್ಪನ್ನು ಗೌರವಿಸುವದರ ಜೊತೆಗೆ ವಕೀಲ ಕಾಯ್ದೆ 1961ರ ಕಲಂ 49 ಪ್ರಕಾರ ಗೊತ್ತುಪಡಿಸಿದ ಪೋಷಾಕಿನಲ್ಲಿ/ಉಡುಪಿನಲ್ಲಿ ನ್ಯಾಯಾಲಯದಲ್ಲಿ ಹಾಜರಾಗಬೇಕು. ವಕೀಲ ಕಾಯ್ದೆಯ ಕಲಂ 30ರ ಪ್ರಕಾರಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಪ್ರಾಧಿಕಾರ ಇತ್ಯಾದಿಗಳಲ್ಲಿ ನ್ಯಾಯಾಧೀಶರು ನ್ಯಾಯವಾದಿಯ ಹತ್ತಿರದ ಸಂಬಂಧಿಗಳಾಗಿದ್ದರೆ ಅಥವಾ ನ್ಯಾಯವಾದಿಯ ಬಗ್ಗೆ ಹಿತಾಸಕ್ತಿ ಉಳ್ಳವ ರಾಗದ್ದರೆ, ಅಂತವರಮುಂದೆ ನ್ಯಾಯವಾದಿಯು ಹಾಜರಾಗಿ ಪ್ರಕರಣಗಳನ್ನು ನಡೆಸಬಾರದು.

**2) ಕಕ್ಷಿದಾರರ ಬಗೆಗಿನ ಕರ್ತವ್ಯಗಳು (ನಿಯಮಗಳು 11-33):** ನ್ಯಾಯವಾದಿಯು ತನ್ನಲ್ಲಿಗೆ ಬಂದ ಕಕ್ಷಿದಾರ ನಿಗೆ ಅವನ ದಾವಾಅಥವಾ ಪ್ರಕರಣದ ಪರಿಸ್ಥಿಯ ಬಗ್ಗೆ ತಿಳಿಸಿ, ದಾವೆಯನ್ನು ದಾಖಲೆ ಮಾಡುವ ಮುನ್ನ ಅದರ ಸಂಪೂರ್ಣ ಮಾಹಿತಿ ಅಥವಾ ತಿಳುವಳಿಕೆಯನ್ನು ಪಡೆಯಬೇಕು. ವಕೀಲ ಮತ್ತುಕಕ್ಷಿದಾರನ ಸಂಬಂಧ ವಯಕ್ತಿಕವಾಗಿದ್ದು, ಕಕ್ಷಿದಾರನಿಂದ ಪಡೆದ ಮಾಹಿತಿಯನ್ನುಯಾವುದೇ ಪರಿಸ್ಥಿತಿಯಲ್ಲಿ ಬಿಟ್ಟುಕೊಡಬಾರದು ಮತ್ತು ಬಹಿರಂಗ ಪಡಿಸಬಾರದು. ಕಕ್ಷಿದಾರನಿಗೆ ಬರಬೇಕಾದ ಪರಿಹಾರವನ್ನು ಕಾನೂನಿನ ಪ್ರಕಾರವೇ ದೊರಕಿಸಿ ಕೊಡಬೇಕೇ ವಿನಃ ಕಾನೂನಿನ ಚೌಕಟ್ಟು ಮೀರಿ ಅಲ್ಲ. ಕಕ್ಷಿದಾರನಿಂದ ಪಡೆದ ಶುಲ್ಕಕ್ಕೆ ಲೆಕ್ಕವಿಡಬೇಕು. ಕಕ್ಷಿದಾರನ ಒಪ್ಪಿಗೆಇಲ್ಲದೆ ಅವನ ಪ್ರಕರಣವನ್ನು ಬೇರೆಯವರಿಗೆ ವಹಿಸುವುದು, ಕಕ್ಷಿದಾರನ ನಂಬಿಕೆ, ವಿಶ್ವಾಸವನ್ನು ದುರುಪಯೋಗ ಪಡಿಸಿಕೊಳ್ಳುವಂತಹ ಯಾವುದೇ ಕೆಲಸವನ್ನು ಮಾಡಬಾರದು. ಒಂದು ಸಲ ಕಕ್ಷಿದಾರನ ಪರ ಒಂದು ದಾವೆಯಲ್ಲಿ ಹಾಜರಾದ ನಂತರ ವಿರುದ್ಧ ಪಕ್ಷದಾರರ ಪ್ರಕರಣದಲ್ಲಿ ಹಾಜರಾಗ ತಕ್ಕದ್ದಲ್ಲ ಅಥವಾ ವಾದಿಸತಕ್ಕದ್ದಲ್ಲ ಅಲ್ಲದೇ ಯಾವುದೇ ರೀತಿಯಿಂದಲುಎದುರು ಪಕ್ಷದಾರರೊಡನೆ ಶಾಮೀಲಾಗತಕ್ಕದ್ದಲ್ಲ. ಕಕ್ಷಿದಾರರ ಮತ್ತು ವಕೀಲರ ಸಂಬಂಧ ಬಹಳ ವಿಶ್ವಾಸನೀಯ ಸಂಬಂಧ ವಾಗಿದ್ದು, ನ್ಯಾಯವಾದಿಯು ಕಕ್ಷಿದಾರನ ನ್ಯಾಸ ದಾರಿಯಿದ್ದಂತೆ ನಂಬಿಕೆಯಿಂದ ಕಾರ್ಯನಿರ್ವ ಹಿಸಬೇಕು. ಕಕ್ಷಿದಾರರ ಸ್ವಹಿತ ಸಂಬಂಧದ ಮೇಲೆ ಪರಿಣಾಮ ಬೀರುವಂತಹ ಪ್ರಸಂಗಳಲ್ಲಿ ಮನಬಿಚ್ಚಿ ಹೇಳಬೇಕು.

**3) ಸಹೋದ್ಯೋಗಿಯೊಂದಿಗಿನ ಕರ್ತವ್ಯ (ನಿಯಮಗಳು 36-39) :** ನ್ಯಾಯವಾದಿಗಳು ತಮ್ಮ ಸಹೋದ್ಯೋಗಿ ವಕೀಲರುಗಳನ್ನು ಸಹೋದರ-ಸಹೋದರಿಯಂತೆ ಕಾಣಬೇಕು ಮತ್ತು ಅವರೊಂದಿಗೆ ಸೌಜನ್ಯ ಮತ್ತು ಸದ್ಭಾವನೆಯಿಂದ ನಡೆದು ಕೊಳ್ಳಬೇಕು. ಒಬ್ಬ ನ್ಯಾಯವಾದಿಯು ಒಬ್ಬ ಕಕ್ಷಿದಾರನ ದಾವೆಯಲ್ಲಿ ಹಾಜರಾದ ಮೇಲೆ ಅವನ ಲಿಖಿತ ಅನುಮತಿ ಇಲ್ಲದೆ ಅಥವಾ ನ್ಯಾಯಾ ಲಯದ ಪರವಾನಿಗೆ ಇಲ್ಲದೆ ಬೇರೊಬ್ಬ ವಕೀಲ ಅದೇದಾವೆಯಲ್ಲಿ ಹಾಜರಾಗಬಾರದು. ನ್ಯಾಯವಾದಿಯು ಪ್ರಕರಣಗಳನ್ನು ಪಡೆಯಲು ಯಾವುದೇ ರೀತಿಯಿಂದಲು ಕೋರತಕ್ಕದ್ದಲ್ಲ. ದಾವೆಯಲ್ಲಿ ವಿರುದ್ಧ ಪಕ್ಷದ ವಕೀಲರೊಂದಿಗೆ ತನ್ನ ಕಕ್ಷಿದಾರನಿಗೆ ಅನ್ಯಾಯವಾಗುವಂತೆ ಸಹಕರಿಸು ವದು, ವಿರುದ್ಧ ಪಕ್ಷದವನ ಅಥವಾ ಅವನ ವಕೀಲರ ಪ್ರಭಾವಕ್ಕೊಳಗಾಗಿ ತನ್ನಕಕ್ಷಿದಾರನ ದಾವಾ ಬಗ್ಗೆ ಯಾವುದೇ ರೀತಿಯಲ್ಲಿ ಹಣ ಅಥವಾ ಪ್ರತಿಫಲವನ್ನು ಪಡೆಯುವದು, ಹಾಗೂ ಎದರು ಪಕ್ಷದ ವ್ಯಕ್ತಿಯೊಂದಿಗೆ ಅವನ ವಕೀಲರ ಒಪ್ಪಿಗೆ ಇಲ್ಲದೆ ಅವರ ಗೈರು ಹಾಜರಿಯಲ್ಲಿ ರಾಜೀ ಸಂಧಾನ ಮಾಡಿಕೊಳ್ಳುವುದು ಮಾಡಬಾರದು.

**4) ಸ್ವಂತಕರ್ತವ್ಯ(ಭಾಗ 5 ನಿಯಮ 1 ರಿಂದ 10):** ನ್ಯಾಯವಾದಿಯು ನ್ಯಾಯಾಲಯದಲ್ಲಿ ಶಿಸ್ತು, ಸಂಯಮ ಮತ್ತು ಸೌಜನ್ಯದಿಂದ ನಡೆದು ಕೊಳ್ಳಬೇಕು. ಕಕ್ಷಿದಾರನಿಗೆ ನ್ಯಾಯ ಒದಗಿಸಿ ಕೊಡಲು ನ್ಯಾಯಾಲಯಕ್ಕೆ ಸರಿಯಾದ ಮಾಹಿತಿ ಒದಗಿಸಿ ಸಹಾಯ ಮಾಡಬೇಕು. ಕಕ್ಷಿದಾರನ ಪರ ಹಾಕಿರುವ ದಾವೆಯನ್ನು ವಿನಾಕಾರಣ ತಡ ಮಾಡದೆ ಸರಿಯಾದ ಸಮಯಕ್ಕೆ ದಾವೆಯನ್ನು ಹಾಜರುಪಡಿಸಬೇಕು.

**5) ಸಾರ್ವಜನಿಕ ಹಾಗೂ ರಾಜ್ಯದ ಬಗೆಗಿನ ಕರ್ತವ್ಯ:** ನ್ಯಾಯವಾದಿಯು ಸಮಾಜಸೇವಕನಂತೆ, ಕಾನೂನು ಮತ್ತು ನ್ಯಾಯದ ಚೌಕಟಿನಲ್ಲಿದ್ದು ಕ್ಕೊಂಡು ದೇಶದ ಪ್ರಗತಿಗಾಗಿ ಮತ್ತು ಸಾರ್ವ ಜನಿಕರ ಹಿತಾಸಕ್ತಿಗನುಗುಣವಾಗಿ ಕಾರ್ಯ ನಿರ್ವಹಿಸಬೇಕು.

**6) ಇತರ ಕರ್ತವ್ಯಗಳು(ಕಲಂ-A ನಿಯಮ 40):** ವಕೀಲ ಮಂಡಳಿಯ ನಾಮಾವಳಿಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ನಿಗದಿತವಾದ ಮೊತ್ತವನ್ನು ರಾಜ್ಯ

(ನಾಲ್ಕನೆಯ ಪುಟಕ್ಕೆ)

## ಸಾಂಸ್ಕೃತಿಕ ಪರಂಪರೆಯ... (ಎರಡನೇ ಪುಟದಿಂದ)

ಧಕ್ಕೆ ತರುವ ಅಪಾಯಗಳಿಗೆ ಪ್ರತಿರೋಧವೊಡ್ಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ವೈಜ್ಞಾನಿಕ ಮತ್ತು ತಾಂತ್ರಿಕ ಅಧ್ಯಯನ ಮತ್ತು ಸಂಶೋಧನೆಯನ್ನು ಅಭಿವೃದ್ಧಿಪಡಿಸುವುದು ಮತ್ತು ಸೂಕ್ತ ಕ್ರಮವನ್ನು ಕಾರ್ಯಕ್ಕಿಳಿಸುವುದು; (4) ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳನ್ನು ಗುರುತಿಸುವ, ಪೊರೆಯುವ, ಸಂರಕ್ಷಿಸುವ, ಅಭಿವ್ಯಕ್ತಿಸುವ ಮತ್ತು ಮರುವಸತಿ ಕಲ್ಪಿಸಲು ಬೇಕಾದ ಕಾನೂನಾತ್ಮಕ, ವೈಜ್ಞಾನಿಕ, ತಾಂತ್ರಿಕ, ಆಡಳಿತಾತ್ಮಕ ಮತ್ತು ಆರ್ಥಿಕ ಕ್ರಮಗಳನ್ನು ಕೈಗೊಳ್ಳುವುದು; ಮತ್ತು (5) ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಯ ಪೊರೆಯುವಿಕೆ, ಸಂರಕ್ಷಣೆ ಮತ್ತು ಅಭಿವ್ಯಕ್ತಿ ಕಾರ್ಯಗಳಲ್ಲಿ ತರಬೇತಿಯನ್ನು ನೀಡುವ ಮತ್ತು ಈ ಕ್ಷೇತ್ರದಲ್ಲಿ ವೈಜ್ಞಾನಿಕ ಸಂಶೋಧನೆಗೆ ಪ್ರೋತ್ಸಾಹವನ್ನು ನೀಡುವ ರಾಷ್ಟ್ರೀಯ ಅಥವಾ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸುವದು ಅಥವಾ ಅಭಿವೃದ್ಧಿ ಪಡಿಸುವುದು. (ಅನುಚ್ಛೇದ 5)

ಯಾವ ರಾಜ್ಯದ ಭೂಕ್ಷೇತ್ರದಲ್ಲಿ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳು ಇವೆಯೋ, ಅಂತಹ ರಾಜ್ಯಗಳ ಸಾರ್ವಭೌಮ ಅಧಿಕಾರವನ್ನು ಗೌರವಿಸುತ್ತಾ ದೇಶೀಯ ಕಾನೂನಿನಲ್ಲಿ ಕೊಡಲಾದ ಆಸ್ತಿ ಹಕ್ಕಿಗೆ ಚ್ಯುತಿ ಬರದಂತೆ, ಈ ಒಪ್ಪಂದದ ಎಲ್ಲ ರಾಷ್ಟ್ರಗಳು ಸದರಿ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳನ್ನು ಜಾಗತಿಕ ಪರಂಪರೆಗಳೆಂದು ಮನ್ನಿಸುತ್ತಾ ಅವುಗಳ ರಕ್ಷಣೆಗೆ ಇಡೀ ಅಂತರ್ರಾಷ್ಟ್ರೀಯ ಸಮುದಾಯವೇ ಸಹಕರಿಸಲು ಕರ್ತವ್ಯಬದ್ಧವಾಗಿದೆ. ಅದರಂತೆ, ಎಲ್ಲ ರಾಷ್ಟ್ರಗಳೂ ಕೂಡಾ ಅವುಗಳ ಗುರುತಿಸುವಿಕೆ, ಪೊರೆಯುವಿಕೆ, ಸಂರಕ್ಷಣೆ ಮತ್ತು ಪ್ರದರ್ಶನಕ್ಕೆ ಅಂತಹ ಪರಂಪರೆಗಳುಳ್ಳ ರಾಷ್ಟ್ರವು ಕೋರಿಕೊಂಡ ಮೇರೆಗೆ ಕರ್ತವ್ಯಬದ್ಧವಾಗಿದೆ. ಪ್ರತಿಯೊಂದು ರಾಷ್ಟ್ರವು ಕೂಡಾ ಅಂತಹ ಪರಂಪರೆಗಳನ್ನು ಬೇಕೆಂದೇ ಘಾಸಿಕೊಳಿಸತಕ್ಕದ್ದಲ್ಲ. (ಅನುಚ್ಛೇದ 6)

ಯುನೆಸ್ಕೊ ಒಪ್ಪಂದದ ಅಡಿಯಲ್ಲಿ ಸಮಾನ ಪ್ರಾದೇಶಿಕ ಪ್ರಾತಿನಿಧ್ಯವುಳ್ಳ 15 ಸದಸ್ಯ ರಾಷ್ಟ್ರಗಳುಳ್ಳ ಒಂದು "ಜಾಗತಿಕ ಪರಂಪರೆಯ ಸಮಿತಿ" ರಚಿಸಲಾಗಿದೆ. ಇದರ ಅವಧಿಯು 3 ವರ್ಷ ವಾಗಿದ್ದು, ಅವಧಿ ಮುಗಿದಂತೆ ಚುನಾವಣೆ ಮೂಲಕ ಮನರ್ರಚನೆಗೊಳ್ಳುತ್ತದೆ. ಈ ಒಪ್ಪಂದಕ್ಕೆ ಭಾಗೀದಾರರಾದ ಎಲ್ಲಾ ರಾಷ್ಟ್ರಗಳು ತಮ್ಮ ಭೂಕ್ಷೇತ್ರದಲ್ಲಿರುವ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳ ಪಟ್ಟಿಯನ್ನು ಜಾಗತಿಕ ಪರಂಪರೆಯ ಸಮಿತಿಗೆ ಸಲ್ಲಿಸತಕ್ಕುದು. ಈ ಸಲ್ಲಿಕೆಯ ಆಧಾರದಲ್ಲಿ ಅಗ್ರಮಾನ್ಯ ವಿಶ್ವಮಟ್ಟದ ಮೌಲ್ಯವುಳ್ಳ ಪರಂಪರೆಗಳ ಪಟ್ಟಿಯನ್ನು ತಯಾರಿಸಿ ಅವುಗಳನ್ನು 2 ವರ್ಷಕ್ಕೊಮ್ಮೆ ಪರಿಷ್ಕೃತಗೊಳಿಸುತ್ತಾ ಪ್ರಕಟಿಸುವುದು ಜಾಗತಿಕ ಪರಂಪರೆಯ ಸಮಿತಿಯ ಹೊಣೆ. ಯುಕ್ತವಾದ ಸಂದರ್ಭಗಳಲ್ಲಿ ಅಂತಹ ಪಟ್ಟಿಯಲ್ಲಿ ನಮೂದಿತವಾದ, ಆದರೆ ಸಂರಕ್ಷಣೆಗೆ ಭಾರೀ ಪ್ರಮಾಣದ ಕಾರ್ಯಾಚರಣೆಯು ಬೇಕಿರುವ ಪರಂಪರೆಗಳನ್ನು ಈ ಕುರಿತು ಸಂಬಂಧಿಸಿದ ರಾಷ್ಟ್ರವು ಸಹಾಯ ಯಾಚಿಸಿದಲ್ಲಿ 'ಅಪಾಯದ ಅಂಚಿನಲ್ಲಿರುವ ಜಾಗತಿಕ ಪರಂಪರೆ' ಯೆಂದು ಪರಿಗಣಿಸಿ ಪಟ್ಟಿ ಮಾಡಲು ಜಾಗತಿಕ ಪರಂಪರೆಯ ಸಮಿತಿಗೆ ಜವಾಬ್ದಾರಿಯಿದೆ. ಅಂತಹ ಪಟ್ಟಿಯಲ್ಲಿ ಅದಕ್ಕೆ ತಗಲುವ ಖರ್ಚು ವೆಚ್ಚಗಳನ್ನು ನಮೂದಿಸ ಬೇಕು. ಅಪಾಯದ ಅಂಚು ಎಂದರೆ ತೀವ್ರವಾಗಿ ಕೆಡುತ್ತಿರುವುದು, ಬೃಹತ್ ಮಟ್ಟದ ಸಾರ್ವಜನಿಕ ಅಥವಾ ಖಾಸಗಿ ಯೋಜನೆಗಳು ಅಥವಾ ಪ್ರವಾಸೀ ಯೋಜನೆಗಳ ಹಾನಿಕಾರಕ ಪರಿಣಾಮ, ಒಡೆತನದ ಬದಲಾವಣೆಯಿಂದಾದ ತೊಂದರೆಗಳು, ಅಜ್ಞಾತ ಕಾರಣಗಳಿಂದಾಗಿ ಆದ ದೊಡ್ಡ ಬದಲಾವಣೆಗಳು, ಅಸಡ್ಡೆಯಿಂದ ಪಾಳುಗೆಡುವಿಕೆ; ಯುದ್ಧ, ನೈಸರ್ಗಿಕ ಪ್ರಕೋಪ, ಬೆಂಕಿ, ಭೂಕಂಪ, ಭೂಕುಸಿತ, ಜ್ವಾಲಾ ಮುಖಿಯ ಘುತ್ಕಾರ, ಪ್ರವಾಹ, ನೀರಿನ ದಿಕ್ಕು ಮತ್ತು ಮಟ್ಟದಲ್ಲಿ ಬದಲಾವಣೆ ಇತ್ಯಾದಿ ಕಾರಣ ಗಳಿಂದಾಗುವ ಅಪಾಯಗಳು ಬರುತ್ತವೆ. ಜಾಗತಿಕ ಪರಂಪರೆಯ ಸಮಿತಿಯು ತಯಾರಿಸುವ ಎರಡೂ ರೀತಿಯ ಪಟ್ಟಿಗಳು ವಸ್ತುನಿಷ್ಠವಾಗಿರಬೇಕು ಮತ್ತು ರಾಷ್ಟ್ರಗಳ ಮನವಿಗಳು ತಿರಸ್ಕೃತವಾಗುವ ಸಂದರ್ಭದಲ್ಲಿ ಕಾರಣ ಕೊಡಬೇಕು. ಎರಡೂ ಪಟ್ಟಿಗಳಲ್ಲಿ ಬಾರದ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳು ಅಪ್ರಾಮುಖ್ಯವೆಂದು ಪರಿಗಣಿಸ ಲಾಗದು. (ಅನುಚ್ಛೇದ 11)

ಜಾಗತಿಕ ಪರಂಪರೆಯ ಸಮಿತಿಯು ಪಟ್ಟಿ ಮಾಡಿದ ಅಪಾಯದ ಅಂಚಿನಲ್ಲಿರುವ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳ ಸಂರಕ್ಷಣೆಗೆ ಮತ್ತು ಮನರ್ವಸತಿಗೆ ಅಂತರ್ರಾಷ್ಟ್ರೀಯ ಸಹಾಯವನ್ನು ಪಡೆಯಲು ರಾಷ್ಟ್ರಗಳು ಸಲ್ಲಿಸಿದ ಬೇಡಿಕೆಗಳನ್ನು ಪ್ರಾಥಮಿಕ ವಿಚಾರಣೆಯ ಆಧಾರದಲ್ಲಿ ಪರಿಗಣಿಸಿ ಸೂಕ್ತವಾದ ಸಹಾಯ, ಅದರ ಸ್ವರೂಪ ಮತ್ತು ವ್ಯವಸ್ಥೆಗಳ ಬಗೆಗೆ ನಿರ್ಣಯ ತೆಗೆದುಕೊಳ್ಳಬೇಕು. ಅದಕ್ಕೆ ತಗಲುವ ವೆಚ್ಚವನ್ನು ಈ ಒಪ್ಪಂದದ ಅಡಿಯಲ್ಲಿ ಸ್ಥಾಪಿಸಲಾದ ಜಾಗತಿಕ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಂಪರೆಗಳ ರಕ್ಷಣಾ ನಿಧಿಯಿಂದ ಭರಿಸುವ ಕುರಿತು ಜಾಗತಿಕ ಪರಂಪರೆಯ ಸಮಿತಿಯು ನಿರ್ಣಯ ತೆಗೆದುಕೊಳ್ಳಬೇಕು. ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಯೂನೆಸ್ಕೊದ ಕಾರ್ಯದರ್ಶಿ ಮತ್ತು ಸಾಂಸ್ಕೃತಿಕ ಸೊತ್ತುಗಳ ಕಾಪಾಡುವಿಕೆ ಮತ್ತು ಪುನಸ್ಥಾಪನೆಗೆ ಇರುವ ಅಂತರ್ರಾಷ್ಟ್ರೀಯ ಅಧ್ಯಯನ ಕೇಂದ್ರದ ಹಾಗೂ ನೈಸರ್ಗಿಕ ಸಂಪನ್ಮೂಲ ಮತ್ತು ನಿಸರ್ಗದ ಸಂರಕ್ಷಣೆಗಾಗಿ ಇರುವ ಅಂತರ್ರಾಷ್ಟ್ರೀಯ ಸಂಘದ ನೆರವನ್ನು ಪಡೆಯಬೇಕು. (ಅನುಚ್ಛೇದ 13) ಯುನೆಸ್ಕೊ ಒಪ್ಪಂದದಲ್ಲಿ "ಜಾಗತಿಕ ಪರಂಪರೆಯ ನಿಧಿ"ಯ ಸ್ಥಾಪನೆ, ಸದಸ್ಯ ರಾಷ್ಟ್ರಗಳು ಅದಕ್ಕೆ ದೇಣಿಗೆ ಕೊಡಬೇಕಾದ ಜವಾಬ್ದಾರಿ, ದೇಣಿಗೆ ನಿಗದಿ ಪಡಿಸುವ ಕ್ರಮ, ದೇಣಿಗೆಯ ಗರಿಷ್ಠ ಮಿತಿ ಇತ್ಯಾದಿಗಳ ಬಗೆಗೆ ವಿವರವಾದ ಪ್ರಾವಿಧಾನಗಳಿವೆ. ❖

## ವಕೀಲ ವೃತ್ತಿಯ ...(ಎರಡನೇ ಪುಟದಿಂದ)

ವಕೀಲ ಮಂಡಳಿಗೆ ಸಲ್ಲಿಸಬೇಕು ಇಲ್ಲದಿದ್ದರೆ ನ್ಯಾಯ ವಾದಿಯ ವೃತ್ತಿ ನಡೆಸುವ ಹಕ್ಕನ್ನು ಏಕೆ ಅಮಾನತ್ತಿ ನಲ್ಲಿಡಬಾರದೆಂದು ಕಾರಣ ಕೇಳಿ ತಿಳುವಳಿಕೆ ಪತ್ರ ನೀಡಬಹುದು. ನ್ಯಾಯವಾದಿಯು ತಾನು ನೀಡ ಬೇಕಾದ ಮೊತ್ತ ನೀಡದಿದ್ದರೆ ಅಥವಾ ಸಕಾರಣ ನೀಡದಿದ್ದರೆ ಅವನ ವೃತ್ತಿ ನಡೆಸುವ ಹಕ್ಕನ್ನು ಅಮಾನತಿನಲ್ಲಿಡಬಹುದು.

**7) ತರಬೇತಿ ನೀಡುವಕರ್ತವ್ಯ (ನಿಯಮ 45):** ಹಿರಿಯ ನ್ಯಾಯವಾದಿಗಳು ಹೊಸದಾಗಿ ನೋಂದಣಿ ಗೊಂಡ ವಕೀಲರುಗಳಿಗೆ ಯಾವುದೇ ರೀತಿಯ ಪ್ರತಿಫಲ ಅಥವಾ ಶುಲ್ಕ ಪಡೆಯದೇ ತರಬೇತಿ ನೀಡುವಕರ್ತವ್ಯವನ್ನು ಹೊಂದಿದ್ದಾರೆ

**8) ಕಾನೂನು ನೆರವು ನೀಡುವಕರ್ತವ್ಯ (ನಿಯಮ 46):** ಯಾವುದೇ ವ್ಯಕ್ತಿಗೆ ನ್ಯಾಯವಾದಿಯ ಅಗತ್ಯ ಬಂದಾಗ ಮತ್ತುಆತನು ಪೂರ್ಣವಾಗಿ ಶುಲ್ಕವನ್ನು ನೀಡಲು ಅಶಕ್ತನಾಗಿದ್ದಲ್ಲಿ ಅಂತಹ ವ್ಯಕ್ತಿಗೆ ಉಚಿತ ಕಾನೂನು ನೆರವು ನೀಡುವಜವಾಬ್ದಾರಿಯು ನ್ಯಾಯ ವಾದಿ ಮೇಲಿದೆ.

**9) ಬೇರೆಸೇವೆಗಳ ಮೇಲೆ ನಿರ್ಬಂಧಗಳು (ನಿಯಮಗಳು 47 ರಿಂದ 52):** ಒಬ್ಬ ನ್ಯಾಯವಾದಿಯು ಕಾನೂನು ವೃತ್ತಿಯಲ್ಲಿ ತೊಡಗಿರುವಾಗ ವಯಕ್ತಿಕವಾಗಿ ತನ್ನನ್ನು ತಾನು ಯಾವುದೇ ವ್ಯಾಪಾರ ಅಥವಾ ವ್ಯವಹಾರದಲ್ಲಿ ತೊಡಗಿಸಿಕೊಳ್ಳಬಾರದು. ಆದರೆ ಯಾವುದೇ ಸಂಸ್ಥೆ ಯಲ್ಲಿ ಅವನು ನಿಷ್ಕ್ರಿಯ ಪಾಲುದಾರನಾಗಿರ ಬಹುದು. ಆದರೆ ಅದು ಕಾನೂನು ವೃತ್ತಿಯ ಘನತೆಗೆ ಕುಂದುತರುವಂತಹದಾಗಿರಬಾರದು. ನ್ಯಾಯ ವಾದಿಯು ಶುಲ್ಕವನ್ನು ಪಡೆಯದೇ ಅಧ್ಯಕ್ಷ ಅಥವಾ ನಿರ್ದೇಶಕನಾಗಿರಬಹುದು. ಆದರೆ ನ್ಯಾಯ ವಾದಿಯು ವೃತ್ತಿನಡೆಸುತ್ತಿರುವಾಗ ಪೂರ್ಣ ಪ್ರಮಾಣದ ಸಂಬಳ ಪಡೆಯುವಂತಹ ಸೇವೆ ಮಾಡಬಾರದು ಆದರೆ ಈ ನಿರ್ಬಂಧವು ನಿಯಮ 28 (2) (ಡಿ) 24 (1) (ಇ) ಪ್ರಕಾರ ಶಾಸನಬದ್ಧವಾಗಿ ನೇಮಕವಾದ ಪೂರ್ಣಕಾಲಿಕ ಕಾನೂನು ಅಧಿಕಾರಿ ಗಳಿಗೆ ಅನ್ವಯಿಸುವದಿಲ್ಲ. ಆದರೆ ನ್ಯಾಯವಾದಿಗಳು ಸಕ್ರಿಯವಾಗಿ ಆಡಳಿತದಲ್ಲಿ, ಸಂಸದಿಯ ಮಸುದೆ ಗಳನ್ನು ಪರಾಮರ್ಶೆ ಮಾಡುವದರಲ್ಲಿ ವಿದ್ಯಾರ್ಥಿಗಳಿಗೆ ಪಾಠಮಾಡುವ ದರಲ್ಲಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವದರಲ್ಲಿ ಹಾಗೂ ಕಾನೂನು ಸಂಬಂಧ ವಿಷಯಗಳ ಮೇಲೆ ಪ್ರವಚನ ಮತ್ತು ಅರೇಕಾಲಿಕ ಸೇವೆಯನ್ನು ವಕೀಲ ಮಂಡಳಿ ಅನುಮತಿ ಪಡೆದು ಮಾಡ ಬಹುದು.

**ಯಶಸ್ವಿ ವಕೀಲಿಕೆಗೆ ಮಾರ್ಗಸೂಚಿಗಳು:** ಒಬ್ಬ ವ್ಯಕ್ತಿ ಯಶಸ್ವಿ ವಕೀಲನಾಗಲು ತನ್ನನ್ನು ತಾನು ವೃತ್ತಿಗೆ ಸಮರ್ಪಣೆ ಮಾಡಿಕೊಂಡು ಪ್ರತಿ ನಿತ್ಯವು ಓದುವ ಹವ್ಯಾಸ, ಪ್ರಕರಣಗಳನ್ನು ವೀಕ್ಷಿಸುವ ರೂಢಿಗಳನ್ನು ಬೇಳಿಸಿಕೊಳ್ಳುವುದರ ಜೊತೆಗೆ ಪ್ರಾಮಾಣಿಕತೆ, ಧೈರ್ಯಶಾಲಿತನ, ಪರಿಶ್ರಮ ಮತ್ತು ಶ್ರದ್ಧೆ, ಬುದ್ಧಿ ವಂತಿಕೆ, ಶಬ್ದಗಳ ಮೇಲೆ ಪ್ರಭುತ್ವ, ಮಾತಿನ ಚಾಕಚಕ್ಯತೆ, ವಾದ ಮಂಡಿಸುವಲ್ಲಿ ನಿರಂತರತೆ, ಪ್ರಕರಣವನ್ನು ಕೂಲಂಕುಶವಾಗಿ ಅರ್ಥಮಾಡಿ ಕೊಂಡು ಅದರ ಸಾಮರ್ಥ್ಯವನ್ನರಿತು ನ್ಯಾಯಾ ಲಯದ ನಿರ್ಣಯಕ್ಕೆ ಅರ್ಹವೋ ಇಲ್ಲವೆಂಬುದನ್ನ ರಿತು ದಾಖಲಿಸುವಿಕೆ, ಉತ್ತಮ ಸಹವಾಸ, ಸಮಯ ಪ್ರಜ್ಞೆಯ ಉಪಾಯವನ್ನು ಹೊಂದಿರಬೇಕು. ❖